**ಸಿ.ಸಿ 182/**2024

**ಪಿ.ಡಬ್ಲ್ಯೂ -1**

ದಿಃ **06.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಆರೋಪಿ ಪರ ಶ್ರೀ ಹೆಚ್ ಪಿ ಎಂ ವಕೀಲರಿಂದಃ**

ನೀವು ವೃತ್ತಿಯಲ್ಲಿ ವಕೀಲರು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ವ್ಯವಸಾಯ ಕೂಡ ಮಾಡುತ್ತೇನೆ. ನಾನು ಕಳೆದ 27 ವರ್ಷಗಳಿಂದ ವೃತ್ತಿಯಲ್ಲಿದ್ದೇನೆ. ಈ ವೃತ್ತಿಗಳನ್ನು ಹೊರತುಪಡಿಸಿ ಇನ್ಯಾವುದೇ ವೃತ್ತಿ ಇರುವುದಿಲ್ಲ. ನಾನು 1998 ರಿಂದ IT returns ನ್ನು ಸಲ್ಲಿಸುತ್ತಿದ್ದೇನೆ. ನಿಮಗೆ 2022-24 ರವರೆಗೆ ಸಲ್ಲಿಸಿರುವ IT returns ನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತಕರಾರು ಇಲ್ಲ, ನಾನು ಸಲ್ಲಿಸುತ್ತೇನೆ. ನೀವು ಲೇವಾದೇವಿ ವ್ಯವಹಾರ ಮಾಡುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಹೊರತುಪಡಿಸಿ ಸುಮಾರು 3-4 ಪ್ರಕರಣಗಳನ್ನು NI Act ಅಡಿಯಲ್ಲಿ ದಾಖಲಿಸಿದ್ದೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 633/2020 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 713/2020 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 924/2021 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿ ಮಿಸ್ 71/2022 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 462/2020 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 411/2020 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸಿಸಿ 297/2025 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ7 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಓ ಎಸ್ 98/2023 ಆಗಿದ್ದು, ಈ ಪ್ರಕರಣವನ್ನು ನೀವು ಹೂಡಿದ್ದು

ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ8 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಅದರಲ್ಲಿ ಹಲವು ಪ್ರಕರಣಗಳು ರಾಜಿಯಾಗಿವೆ. ಇನ್ನೂ ಹಲವು ಪ್ರಕರಣಗಳು recovery ಗಾಗಿ ಸಲ್ಲಿಸಿರುತ್ತೇನೆ. ಅದರಲ್ಲಿ ಅಸಲು ದಾವೆ ಕರಾರಿಗೆ ಸಂಬಂಧಪಟ್ಟಿದ್ದು.

ನೀವು ನಿಮ್ಮ IT returns ನಲ್ಲಿ ಯಾರು ಯಾರಿಗೆ ಸಾಲವನ್ನು ನೀಡಿದ್ದೀರಿ ಎಂದು ನಮೂದಿಸಿದ್ದೀರಾ ಎಂದರೆ ನಮೂದಿಸಿಲ್ಲ, ಸಾಕ್ಷಿ ಮುಂದುವರಿದು ಅವಶ್ಯಕತೆ ಇರುವುದಿಲ್ಲ. IT returns ನ್ನು ನಾನೇ ಖುದ್ದಾಗಿ ನೀಡಿರುತ್ತೇನೆ. ಮುಂಚಿತವಾಗಿ ಯಾವುದೇ ನೋಟಿಸ್ ಬಂದಿರುವುದಿಲ್ಲ. ನೀವು IT returns ನಲ್ಲಿ ಯಾರು ಯಾರಿಗೆ ಸಾಲವನ್ನು ನೀಡಿದ್ದೀರೋ ಅವೆಲ್ಲಾ ಕಡ್ಡಾಯವಾಗಿ ನಮೂದಾಗಿರಬೇಕಿತ್ತು ಎಂದರೆ ಸರಿಯಲ್ಲ. ನಾನು ಸಾಲವನ್ನು ಹಲವರಿಗೆ ನಗದು ಮುಖಾಂತರ ಇನ್ನಿತರರಿಗೆ ಚೆಕ್ ಮೂಲಕ ನೀಡಿರುತ್ತೇನೆ. ನಿಮಗೆ Income Tax Act ಕಾಯ್ದೆ ಇದೆ ಎಂದು ನಿಮಗೆ ತಿಳಿದಿದೆಯೇ ಎಂದರೆ ತಿಳಿದಿದೆ. Income Tax Act ಅಡಿಯಲ್ಲಿ ರೂ.20,000 ಗಿಂತ ಹೆಚ್ಚಿನ ಮೊತ್ತವನ್ನು ಸಾಲವಾಗಿ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ ಎಂದರೆ ಸರಿಯಲ್ಲ. Income Tax Act ನ ಕಲಂ 260-270 ಅಡಿಯಲ್ಲಿ ಈ ಬಗ್ಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಯ್ದೆಯಲ್ಲಿ ನಗದು ವ್ಯವಹಾರ ಶಿಕ್ಷಾರ್ಹ ಅಪರಾಧ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಸುಮಾರು 10 ವರ್ಷಗಳಿಂದ ಆರೋಪಿಯ ಪರಿಚಯವಿದೆ. ಆರೋಪಿ ನನಗೆ ರಕ್ತ ಸಂಬಂಧಿಯಲ್ಲ. ಆರೋಪಿ ನನಗೆ ಶಾಲೆ ಅಥವಾ ಕಾಲೇಜಿನಲ್ಲಿ ಸಹಪಾಠಿಯಲ್ಲ. ಆರೋಪಿ ಹಾಗೂ ನಾನು ಒಂದೇ ಗ್ರಾಮದವರಲ್ಲ. ಆರೋಪಿ ನಮ್ಮ ಜಮೀನಿನ ಅಜೂಬಾಜುದಾರರೂ ಅಲ್ಲ. ಆರೋಪಿ ಗ್ರಾಮಪಂಚಾಯತಿ ಸದಸ್ಯರಾಗಿದ್ದರು, ಆ ಮೂಲಕ ನನಗೆ ಪರಿಚಯ ಹಾಗೂ ಗಣೇಶ್,ಸುಬ್ರಮಣ್ಯ ಮತ್ತು ನನ್ನ ಇತರ clients ಗಳಿಂದ ಪರಿಚಯ. ಸದರಿ ಗಣೇಶ್ ರವರು ವೃತ್ತಿಯಲ್ಲಿ ವಕೀಲರು ಎಂದರೆ ಸರಿ. ಗಣೇಶ್ ರವರು ಬಿ ಆರ್ ಕಾವಲು ಗ್ರಾಮದವರು ಎಂದರೆ ಸರಿ, ಆರೋಪಿ ಸಹ ಅದೇ ಗ್ರಾಮದವರು ಎಂದರೆ ಸರಿ. ಆರೋಪಿ ಮತ್ತು ಗಣೇಶ್ ರವರು ಸಂಬಂಧಿಕರಾ ಎಂದರೆ ಸಾಕ್ಷಿ ಅವರು ಸ್ನೇಹಿತರು ಎಂದು ನುಡಿಯುತ್ತಾರೆ. ಗಣೇಶ್ ರವರು ಆರೋಪಿಯನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷ ದಂದು ನನಗೆ ಭೇಟಿ ಮಾಡಿಸಿದರು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ.

ನನ್ನ ಪ್ರಮಾಣಪತ್ರದಲ್ಲಿ "ಆರೋಪಿಯು ನನ್ನ ಬಳಿ ಬಂದು" ಎಂದು ನಮೂದಿಸಿದೆ ಸದರಿ ದಿನಾಂಕದಂದು ಆರೋಪಿ ಸಾಲವನ್ನು ಪಡೆಯಲು ಬಂದಿದ್ದರು. ನಾನು ಸಾಲವನ್ನು ನೀಡಿದ ದಿನದಿಂದ ಸುಮಾರು 10 ದಿನದ ಹಿಂದೆ ಆರೋಪಿ ಸಾಲವನ್ನು ಕೇಳಿದ್ದರು. ಆರೋಪಿ ಯಾವ ದಿನಾಂಕದಂದು ಸಾಲವನ್ನು ಕೇಳಿದ್ದರು ಎಂದು ನಿಮ್ಮ ಪ್ರಮಾಣಪತ್ರ ಹಾಗೂ ದೂರಿನಲ್ಲಿ ನಮೂದಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಸಾಲವನ್ನು ಕೇಳಲು ಅವರೊಬ್ಬರೇ ಬಂದಿದ್ದರು. ನೀವು ನಿಮ್ಮ ಪ್ರಮಾಣಪತ್ರದಲ್ಲಿ ಆರೋಪಿಯು ತನ್ನ ಹಿಂದಿನ ಬ್ಯಾಂಕ್ ಸಾಲ ಹಾಗೂ ಕೈ ಸಾಲ ತೀರಿಸಲು ಹಣವನ್ನು ಪಡೆದಿದ್ದರು ಎಂದು ನಮೂದಿಸಿದ್ದೀರಿ ಈ ಬಗ್ಗೆ ಯಾವ ಬ್ಯಾಂಕ್ ನಲ್ಲಿ ಸಾಲವಿದೆ ಹಾಗೂ ಎಲ್ಲಿ ಕೈ ಸಾಲವನ್ನು ಪಡೆದಿದ್ದರು ಎಂದು ನಿಮಗೆ ಇದ್ದ 10 ದಿನಗಳಲ್ಲಿ ಅದರ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಅವಶ್ಯಕತೆ ಇರಲಿಲ್ಲ, ಸಾಕ್ಷಿ ಮುಂದುವರಿದು ಆರೋಪಿಯ ಮೇಲೆ ನಂಬಿಕೆ ಇದ್ದ ಕಾರಣ ನಾನು ವಿಚಾರಿಸಿರಲಿಲ್ಲ. ಆರೋಪಿ ನಿಮ್ಮ ಬಳಿ ಬಂದ ನಂತರ ಆರೋಪಿಯನ್ನು ಪರಿಚಯ ಮಾಡಿಸಿದವರಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆರೋಪಿಯ ಮೇಲೆ ನಂಬಿಕೆ ಇದ್ದ ಕಾರಣ ನಾನು ತಿಳಿಸಲಿಲ್ಲ ಹಾಗೂ ಅದರ ಅವಶ್ಯಕತೆ ಇರಲಿಲ್ಲ. ನೀವು ಆರೋಪಿಯ ಹಿಂದಿನ ಬ್ಯಾಂಕ್ ಸಾಲ ಮತ್ತು ಕೈ ಸಾಲದ ಬಗ್ಗೆ ಮಾಹಿತಿಯನ್ನು ಪಡೆದು ನೀವೇ ಅದನ್ನು ತೀರಿಸಬಹುದಿತ್ತಲ್ಲಾ ಎಂದರೆ ಸಾಕ್ಷಿ ನಾನು ಚೆಕ್ಕನ್ನು ನೀಡುತ್ತೇನೆ ಎಂದು ಹೇಳಿದ್ದೆ ಆರೋಪಿಯೇ ನಗದಾಗಿ ನೀಡಿ ಎಂದು ಕೇಳಿದ್ದರು ಆದ್ದರಿಂದ ನಾನು ನಗದಾಗಿ ನೀಡಿದ್ದೆ.

ಆರೋಪಿಗೆ ಸುಮಾರು 3-4 ಎಕರೆ ಜಮೀನು ಇರುತ್ತದೆ. ನಾನು ಅದರ ಪಹಣಿಯನ್ನು ನೋಡಿಲ್ಲ, ಅವರು ವ್ಯವಸಾಯ ಮಾಡುವುದನ್ನು ನೋಡಿದ್ದೇನೆ. ಆರೋಪಿ ಮತ್ತು ನನ್ನ ಗ್ರಾಮ ಅಕ್ಕಪಕ್ಕದಲ್ಲಿಲ್ಲ. ನಿಮ್ಮ ಸ್ನೇಹಿತರ ಅಥವಾ ನಿಮ್ಮ ಕಕ್ಷಿದಾರರ ಜಮೀನುಗಳು ಆರೋಪಿಯ ಜಮೀನಿನ ಪಕ್ಕದಲ್ಲಿದೆಯಾ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನ್ನ ಸ್ನೇಹಿತರು ವ್ಯವಸಾಯ ಮಾಡುತ್ತಿರುವ ಜಮೀನಿನ ಅಕ್ಕಪಕ್ಕದಲ್ಲಿ ಆರೋಪಿ ವ್ಯವಸಾಯ ಮಾಡುತ್ತಾರೆ. ನನ್ನ ಸ್ನೇಹಿತರ ಹೆಸರು ಕೃಷ್ಣೇಗೌಡ, ಸುಬ್ರಮಣ್ಯ, ಗಣೇಶ. ಆರೋಪಿ ಪಾಲಾಕ್ಷ ಎಂಬುವವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಆರೋಪಿ ವಾಸವಿರುವ ಗ್ರಾಮಕ್ಕೆ ಸುಮಾರು ತಿಂಗಳಿಗೆ ಒಮ್ಮೆ ಅಂದರೆ ಹಬ್ಬಹರಿದಿನಗಳಲ್ಲಿ ಹಾಗೂ ನನ್ನ ಸ್ನೇಹಿತರನ್ನು ಭೇಟಿ ಮಾಡಲು ಅಥವಾ ಸಮಾರಂಭಗಳಿಗೆ ಹೋಗುತ್ತೇನೆ. ಆ ಊರಿನಲ್ಲಿ ನನ್ನ ದೂರದ ಸಂಬಂಧಿಕರು ಇದ್ದಾರೆ. ನೀವು ಈ ಹಿಂದೆ ಹೇಳಿದ 10 ದಿನಗಳಲ್ಲಿ ಬಿ ಆರ್ ಕಾವಲ್ ಗ್ರಾಮಕ್ಕೆ ಹೋಗಿದ್ದೀರಾ ಎಂದರೆ ಹೋಗಿರಬಹುದು, ನನಗೆ ನೆನಪಿಲ್ಲ. ನೀವು ಬಿ ಆರ್ ಕಾವಲು ಗ್ರಾಮಕ್ಕೆ ಆ 10 ದಿನದಲ್ಲಿ ಹೋಗಿದ್ದಾಗ ನಿಮ್ಮ

ಬಂಧುಬಳಗದವರಿಗೆ ಆರೋಪಿ ಸಾಲವನ್ನು ಕೇಳಿದ ಬಗ್ಗೆ ತಿಳಿಸಿದ್ದೀರಾ ಎಂದರೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ ನಗದಿನ ಮುಖಾಂತರ ಸಾಲವನ್ನು ಕೊಟ್ಟ ಬಗ್ಗೆ ನಿಪಿ1 ನ್ನು ಹೊರತುಪಡಿಸಿ ಇನ್ಯಾವುದೇ ದಾಖಲಾತಿಯನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರಿದು ಆರೋಪಿ ನಾನು ಸಾಲವನ್ನು ನೀಡಿದ ನಂತರ ನಿಪಿ1 ನ್ನು ನೀಡಿರುತ್ತಾರೆ. ಸಾಲ ಕೊಡುವ ಸಮಯದಲ್ಲಿ ಆರೋಪಿ ಮೇಲೆ ನಂಬಿಕೆ ಇದ್ದ ಕಾರಣ ಯಾವುದೇ ದಾಖಲಾತಿ ಪಡೆದಿರುವುದಿಲ್ಲ. ಸಾಲ ಕೊಡುವ ವೇಳೆ promissory note and receipt ಸಾಮಾನ್ಯವಾಗಿ ಪಡೆಯುತ್ತಾರೆ ಎಂದರೆ ಸರಿಯಲ್ಲ. ನಿಪಿ6 ರಲ್ಲಿ ದಿಃ03.06.2023 ರಂದು self ಎಂದು ನಮೂದಾಗಿದೆ, ನೀವು ಆರೋಪಿಯ ಹೆಸರನ್ನೇ ನಮೂದಿಸಿ ಬ್ಯಾಂಕ್ ನಿಂದ ಹಣವನ್ನು ಪಡೆಯಬಹುದಿತ್ತು ಎಂದರೆ ಸಾಕ್ಷಿ ಆ ರೀತಿ ಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಆರೋಪಿಗೆ ಸಾಲವನ್ನು ನೀಡುವುದಕ್ಕೆ ನಾನು self ಎಂದು ಬರೆದು ಹಣವನ್ನು withdraw ಮಾಡಿರುತ್ತೇನೆ. ಬ್ಯಾಂಕ್ ನಿಂದ ಹಣವನ್ನು withdraw ಮಾಡಲು ನಾನೊಬ್ಬನೇ ಹೋಗಿದ್ದೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ.

ಈ 4 ಲಕ್ಷವನ್ನು ಪಡೆದ ಬಗ್ಗೆ IT returns ನಲ್ಲಿ ನಮೂದಿಸಿದ್ದೀರಾ ಎಂದರೆ ಈ ಪ್ರಶ್ನೆಯನ್ನು ನಿಮಗೆ ಕೇಳಲು ಬರುವುದಿಲ್ಲ, ಸಾಕ್ಷಿ ಮುಂದುವರಿದು ನಾನು IT returns ನ್ನು file ಮಾಡುವ ಸಮಯದಲ್ಲಿ ನನ್ನ bank statement ನ್ನು ಸಲ್ಲಿಸಿರುತ್ತೇನೆ. ನನಗೆ 4 ಲಕ್ಷ ಹಣದ ಮೂಲ ನನ್ನ ಎರಡೂ ವೃತ್ತಿಯಿಂದ ಬಂದಿರುತ್ತದೆ. ದಿಃ03.06.2023 ರಂದು ಬ್ಯಾಂಕಿನಿಂದ ಹಣವನ್ನು ಪಡೆದು ಅದೇ ದಿನ ಸಾಯಂಕಾಲ ಆರೋಪಿಗೆ ನೀಡಿರುತ್ತೇನೆ. ನನ್ನ ಕಛೇರಿಯಲ್ಲಿ ಹಣವನ್ನು ನೀಡಿರುತ್ತೇನೆ, ಆಗ ನನ್ನನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಈ ಪ್ರಶ್ನಿತ ಹಣವನ್ನು ಹೊರತುಪಡಿಸಿ ನಿಮ್ಮಗಳ ಮಧ್ಯೆ ಇನ್ಯಾವುದೇ ಹಳೆ ವ್ಯವಹಾರ ಇತ್ತಾ ಎಂದರೆ ಸಾಕ್ಷಿ ಮುಂಚೆ ಸಹ ಹಣವನ್ನು ನೀಡಿರುತ್ತೇನೆ. ಅದನ್ನು ಅವರು ಮರುಪಾವತಿಸಿದ್ದಾರೆ. ಅಂದಾಜು ಎಷ್ಟು ಸಾರಿ ಈ ರೀತಿ ಹಣವನ್ನು ನೀಡಿದ್ದೀರಾ ಎಂದರೆ ನೆನಪಿಲ್ಲ. ಆ ರೀತಿ ಪ್ರಶ್ನಿತ ಹಣವನ್ನು ನಾನು ನಗದಿನ ಮುಖಾಂತರವೇ ನೀಡಿರುತ್ತೇನೆ. ಆರೋಪಿಗೆ ನೀವು ಹೇಳುವ ಹಾಗೆ ಹಣವನ್ನು ನೀಡಿದ್ದನ್ನು IT returns ನಲ್ಲಿ ನೀವು ತೋರಿಸಿದ್ದೀರಿ ಎಂದರೆ ಸಾಕ್ಷಿ ನಾನು IT returns ನ್ನು file ಮಾಡುವ ಸಮಯದಲ್ಲಿ ನನ್ನ bank statement ನ್ನು ಸಲ್ಲಿಸಿರುತ್ತೇನೆ. ನಿಮ್ಮ bank statement ನಲ್ಲಿ ಆರೋಪಿಯ ಹೆಸರು ನಮೂದಾಗಿದೆಯಾ ಎಂದರೆ ನಮೂದಾಗಿರುವುದಿಲ್ಲ.

ಪಿ.ಡಬ್ಲ್ಯೂ -1

ಆರೋಪಿಗೆ ಪ್ರಶ್ನಿತ ಹಣವನ್ನು ಯಾರ ಸಮ್ಮುಖದಲ್ಲಿಯೂ ನೀಡಿರುವುದಿಲ್ಲ. ಪ್ರಶ್ನಿತ ಹಣವನ್ನು ಆರೋಪಿಗೆ ನೀಡಿದ ದಿನ ಅಥವಾ ನಂತರ ಗಣೇಶ್ ಮತ್ತು ಸುಬ್ರಮಣ್ಯರವರಿಗೆ ಈ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿಲ್ಲ, ಆದರೆ ಆರೋಪಿ ಚೆಕ್ಕನ್ನು ನೀಡಿದ ನಂತರ ಅದು cheque bounce ಆದ ನಂತರ ಅವರಿಗೆ ತಿಳಿಸಿದ್ದೇನೆ. ಯಾವ ಕಾರಣಕ್ಕಾಗಿ ಚೆಕ್ ಬೌನ್ಸ್ ಆದ ನಂತರ ತಿಳಿಸಿದ್ದು ಎಂದರೆ ಸಾಕ್ಷಿ ಆರೋಪಿಯನ್ನು ನಂಬಿ ಹಣವನ್ನು ನೀಡಿದ್ದೆ, ಅವನು ಈ ರೀತಿ ಮೋಸ ಮಾಡಿದ್ದಾರೆ ಎಂದು ಅವರಿಗೆ ತಿಳಿಸಿದ್ದೆ. ಅವರು ಆರೋಪಿಗೆ ಹೇಳುತ್ತೇವೆ ಎಂದು ತಿಳಿಸಿದರು. ಗಣೇಶ್ ಮತ್ತು ಸುಬ್ರಮಣ್ಯ ಈ ಪ್ರಶ್ನಿತ ಹಣಕ್ಕೆ surety ಆಗಿರಲಿಲ್ಲ. ನಿಪಿ1 ನ್ನು ಆರೋಪಿ ಯಾವಾಗ ನೀಡಿದ್ದರು ಎಂದರೆ ಸಾಕ್ಷಿ 08.02.2024 ಎಂದು ನಮೂದು ಮಾಡಿ ಆ ದಿನದಿಂದ 15 ದಿನದ ಹಿಂದೆ ನೀಡಿದ್ದರು. ಆರೋಪಿ ಒಬ್ಬರೇ ಬಂದು ನನ್ನ ಕಛೇರಿಯಲ್ಲಿ ನಿಪಿ1 ನ್ನು ನೀಡಿದ್ದರು. ನಿಪಿ1 ರ ಮೇಲೆ ಸಹಿಯನ್ನು ಆರೋಪಿ ನನ್ನ ಮುಂದೆಯೇ ಮಾಡಿದ್ದರು. ಬರವಣಿಗೆಯನ್ನು ಅವರು ಬರೆಸಿಕೊಂಡು ಬಂದಿದ್ದರು. ನಿಪಿ1 ರಲ್ಲಿ 4 ಲಕ್ಷ ಹಣ ಮಾತ್ರ ಕಂಡುಬರುತ್ತಿದ್ದೆ ನೀವು ಯಾವುದೇ ಬಡ್ಡಿಯನ್ನು ಸೇರಿಸಿಲ್ಲ ಎಂದರೆ ಆರೋಪಿಯ ಮೇಲೆ ವಿಶ್ವಾಸವಿದ್ದ ಕಾರಣ ಯಾವುದೇ ಬಡ್ಡಿ ಪಡೆದಿರಲಿಲ್ಲ. ಇತರೆ ಪ್ರಕರಣಗಳಲ್ಲಿಯೂ ಸಹ ಬಡ್ಡಿಯನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ನಾನು ವಿಶ್ವಾಸದ ಮೇಲೆ ಕೊಟ್ಟಿರುತ್ತೇನೆ, ಬಡ್ಡಿಯನ್ನು ಪಡೆಯುವುದಿಲ್ಲ. ನೀವು ರಾಜಿಯಾದ ಪ್ರಕರಣಗಳಲ್ಲಿ ನಿಮ್ಮ ದೂರಿನಲ್ಲಿ ನಮೂದಿಸಿರುವ ಹಣವನ್ನೇ ಪಡೆದು ರಾಜಿ ಮಾಡಿಕೊಂಡಿದ್ದೀರಿ ಎಂದರೆ ಸರಿ. ಆ ರೀತಿ ನ್ಯಾಯಾಲಯಕ್ಕೆ ಮೆಮೋ ಸಲ್ಲಿಸುವಾಗ ನಮೂದು ಮಾಡಿದ್ದೀರಾ ಎಂದರೆ ನೆನಪಿಲ್ಲ. ಇತರೆ ಪ್ರಕರಣಗಳ ordersheet ಮತ್ತು ದೂರುಗಳನ್ನು ನಿಮಗೆ ಸಲ್ಲಿಸಲು ತಕರಾರು ಇದೆಯಾ ಎಂದರೆ ಅವಶ್ಯಕತೆ ಇಲ್ಲ. ಸಾಕ್ಷಿ ಮುಂದುವರಿದು ಅವಶ್ಯಕತೆ ಇದ್ದರೆ ನೀವು ಸಲ್ಲಿಸಬಹುದು. PMLA Act ಅಡಿಯಲ್ಲಿ ನೀವು 3-5 ಜನಕ್ಕಿಂತ ಹೆಚ್ಚಿನ ಜನಕ್ಕೆ ಸಾಲವನ್ನು ನೀಡಿದರೆ ಅದು ಶಿಕ್ಷಾರ್ಹ ಅಪರಾಧ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾನು ಆ ರೀತಿ money lending ವ್ಯವಹಾರ ಮಾಡಿರುವುದಿಲ್ಲ. ಪರವಾನಿಗೆ ಇಲ್ಲದೇ ನೀಡುವ ಸಾಲವನ್ನು money lending ಎಂದು ಪರಿಗಣಿಸುತ್ತಾರೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದ ಪ್ರಕರಣಗಳು ಮತ್ತು ಈ ಪ್ರಸ್ತುತ ಪ್ರಕರಣದಲ್ಲಿ ನೀವು ಸಾಲವನ್ನು ನೀಡಿದ್ದೀರಿ ಎಂದು ನಮೂದು ಮಾಡಿದ್ದೀರಿ ಎಂದರೆ ಸರಿ. ಆದ ಕಾರಣ PMLA Act ಅಡಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದೀರಿ ಎಂದರೆ ಸಾಕ್ಷಿ ನಾನು money lending ವ್ಯವಹಾರ ಮಾಡಿರುವುದಿಲ್ಲ. PMLA Act, Indian Contract Act and Negotiable Instruments Act ನಿಯಮಗಳನ್ನು ಉಲ್ಲಂಘಿಸಿದ್ದೀರಿ

ಎಂದರೆ ಸರಿಯಲ್ಲ. ನೀವು ಈ ಪ್ರಕರಣದಲ್ಲಿ ನೀಡಿರುವ ಪ್ರಶ್ನಿತ ಸಾಲ public policy and legally enforceable debt ಗೆ ವಿರುದ್ಧವಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ1 ನ್ನು ಹೊರತುಪಡಿಸಿ ಆರೋಪಿ ಸಾಲಗಾರ ಎಂದು ಬರವಣಿಗೆಯಲ್ಲಿ ಇರುವ ದಾಖಲಾತಿ ಇತ್ತಾ ಎಂದರೆ ನಿಪಿ1 ನ್ನು ಹೊರತುಪಡಿಸಿ ಇನ್ಯಾವುದೇ ದಾಖಲಾತಿ ಇರುವುದಿಲ್ಲ. ಆ ರೀತಿ ದಾಖಲೆಯನ್ನು ನೀವು ಕಡ್ಡಾಯವಾಗಿ ಮಾಡಬೇಕಿತ್ತು ಎಂದು ನಿಮ್ಮ ವೃತ್ತಿಯ ಅನುಭವದಿಂದ ನಿಮಗೆ ತಿಳಿದಿರುತ್ತದೆ ಎಂದರೆ ಸಾಕ್ಷಿ ಆರೋಪಿಯ ಮೇಲೆ ವಿಶ್ವಾಸವಿದ್ದ ಕಾರಣ ನಾನು ಆ ರೀತಿ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ. ಆ ರೀತಿ ಯಾವುದೇ ದಾಖಲಾತಿಯನ್ನು ಮಾಡಿಕೊಳ್ಳದ ಕಾರಣ ನೀವು ನೀಡಿರುವ ಪ್ರಶ್ನಿತ ಸಾಲ lawful transaction ಗೆ ವಿರುದ್ಧವಾದದ್ದು ಎಂದರೆ ಸರಿಯಲ್ಲ. ನೀವು ಆರೋಪಿಯ ಹೆಂಡತಿ ಬ್ಯಾಂಕ್ ಅಕೌಂಟ್ ಅಥವಾ ಅವರ ಮಕ್ಕಳ ಬ್ಯಾಂಕ್ ಅಕೌಂಟ್ ಗೆ ಪ್ರಶ್ನಿತ ಹಣವನ್ನು ಹಾಕಬಹುದಿತ್ತಲ್ಲ ಎಂದರೆ ಆರೋಪಿಯ ಮೇಲೆ ವಿಶ್ವಾಸವಿದ್ದ ಕಾರಣ ಕೇಳಿರುವುದಿಲ್ಲ. ಆದ ಕಾರಣ ಪ್ರಶ್ನಿತ ವ್ಯವಹಾರ ಸಂಶಯವನ್ನು ಉಂಟುಮಾಡುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಪ್ರಶ್ನಿತ ಸಾಲವನ್ನು ನೀಡುವ ಸಮಯದಲ್ಲಿ ಆರೋಪಿಯ ಆಧಾರ್ ಕಾರ್ಡನ್ನು ನಾನು ನೋಡಿರುತ್ತೇನೆ. ಅದರ ಪ್ರತಿಯನ್ನು ಪಡೆದಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಗುರುತಿನ ಚೀಟಿಯ ಮೇಲೆ ಅವರ ಸಹಿಯನ್ನು ಪಡೆಯುತ್ತಾರೆ ಎಂದರೆ ಸಾಕ್ಷಿ ನನಗೆ ಆರೋಪಿಯ ಪರಿಚಯವಿದ್ದ ಕಾರಣ ನಾನು ಅವರ ಸಹಿಯನ್ನು ಪಡೆದಿರುವುದಿಲ್ಲ, ಅದರ ಪ್ರತಿಯನ್ನು ಪಡೆದಿರುವುದಿಲ್ಲ. ನಾನು ಬ್ಯಾಂಕ್ ನ ಹಿಂಬರಹ ಪಡೆದ ನಂತರ ಆರೋಪಿಗೆ ಕರೆ ಮಾಡಿ ಹಾಗೂ ಖುದ್ದಾಗಿ ಅವರನ್ನು ಭೇಟಿ ಮಾಡಿ ಬ್ಯಾಂಕ್ ನ ಹಿಂಬರಹದ ಬಗ್ಗೆ ತಿಳಿಸಿರುತ್ತೇನೆ. ಆರೋಪಿಯ ಗ್ರಾಮದಲ್ಲಿಯೇ ಬೇಟಿಯಾಗಿರುತ್ತೇನೆ. ನಾನು ಆರೋಪಿಗೆ ಸುಮಾರು ಬಾರಿ ದೂರವಾಣಿ ಕರೆ ಮಾಡಿರುತ್ತೇನೆ. ಈ ಬಗ್ಗೆ call details ನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದಾ ಎಂದರೆ ಅವಶ್ಯಕತೆ ಇಲ್ಲ. ನೀವು ನ್ಯಾಯಾಲಯಕ್ಕೆ ಕಡ್ಡಾಯವಾಗಿ ಆ ದಾಖಲೆಯನ್ನು ಸಲ್ಲಿಸಬೇಕು ಎಂದರೆ ಅವಶ್ಯಕತೆ ಇಲ್ಲ. ಯಾವ ದಾಖಲಾತಿ ಅವಶ್ಯಕತೆ ಇದೆ ಹಾಗೂ ಅವಶ್ಯಕತೆ ಇಲ್ಲ ಎಂದು ನ್ಯಾಯಾಲಯ ತೀರ್ಮಾನಿಸುತ್ತದೆ ಎಂದರೆ ಸರಿ. ನೀವು ಮೇಲಿನ ಪ್ರಶ್ನೆಗೆ ಅವಶ್ಯಕತೆ ಇಲ್ಲ ಎಂದು ನುಡಿದಿದ್ದು ನಿಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹಾಗೂ ಸುಳ್ಳು ದೂರನ್ನು ಸಾಬೀತುಪಡಿಸಲು ಈ ರೀತಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಸಿ.ಸಿ 182/**2024

ಪಿ.ಡಬ್ಲ್ಯೂ -1

ನಾನು ಆರೋಪಿಗೆ ಖುದ್ದಾಗಿ ಭೇಟಿ ಮಾಡಿ ಪ್ರಶ್ನಿತ ಸಾಲವನ್ನು ಕೇಳಲು ಹೋದಾಗ ನಾನು ಆರೋಪಿ, ಆರೋಪಿಯ ಮಗ ಇದ್ದರು. ಆರೋಪಿಯ ಮಗ ವಕೀಲರಾದ ಕಾರಣ ಅವರಿಗೂ ಸಹ ಈ ಬಗ್ಗೆ ತಿಳಿಸಿದ್ದೆ. ಆರೋಪಿಯ ಮಗನನ್ನು ಮುಂಚಿತವಾಗಿ ಭೇಟಿಯಾಗಿದ್ದೀರಾ ಎಂದರೆ ಸಾಕ್ಷಿ ಚೆಕ್ ಬೌನ್ಸ್ ಆದ ಕಾರಣ ಭೇಟಿಯಾಗಿರುತ್ತೇನೆ. ಆರೋಪಿಯನ್ನು ಭೇಟಿ ಮಾಡಿದ ದಿನ ಅವರು ಪ್ರಶ್ನಿತ ಹಣವನ್ನು ಮರುಪಾವತಿಸಿದ್ದಾರಾ ಎಂದರೆ ಮರುಪಾವತಿಸಿರುವುದಿಲ್ಲ, ಆದ ಕಾರಣ ಪ್ರಕರಣವನ್ನು ಹೂಡಿದ್ದೇನೆ. ಆರೋಪಿಯನ್ನು ಭೇಟಿಯಾದ ಬಗ್ಗೆ ನಿಮ್ಮ ಸ್ನೇಹಿತರಾದ ಗಣೇಶ್ ಮತ್ತು ಸುಬ್ರಮಣ್ಯರವರಿಗೆ ಆ ದಿನದಂದೇ ವಿಷಯವನ್ನು ತಿಳಿಸಿದ್ದೀರಾ ಎಂದರೆ ತಿಳಿಸಿರುವುದಿಲ್ಲ. ಆರೋಪಿಯನ್ನು ಭೇಟಿ ಮಾಡಲು ಹೋಗುವ ಮುನ್ನ ಗಣೇಶ್ ಮತ್ತು ಸುಬ್ರಮಣ್ಯರವರಿಗೆ ತಿಳಿಸಿದ್ದೀರಾ ಎಂದರೆ ತಿಳಿಸಿರುವುದಿಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,

ಹುಣಸೂರು.